

ಸಂಪಾದಕೀಯ

# ಧರ್ಮ ಸಂಸ್ಥಾಪನೆ

ಅನೇಕ ಕಾರಣಗಳಿಂದ ಮೇ ತಿಂಗಳಲ್ಲಿ ಮಹಾಪುರುಷರುಗಳ ನೆನಪನ್ನು ಮಾಡಿಕೊಳ್ಳುತ್ತೇವೆ. ಬುದ್ಧ, ಶಂಕರ, ರಾಮಾನುಜ, ಬಸವಣ್ಣ — ಇವರ ಜಯಂತಿಯನ್ನು ಈ ತಿಂಗಳಿನಲ್ಲೇ ಆಚರಿಸುತ್ತೇವೆ. ಅಲ್ಲದೆ, ರಾಮಕೃಷ್ಣ ಮಹಾಸಂಘ ಸ್ಥಾಪನೆಗೊಂಡದ್ದೂ ಮೇ ತಿಂಗಳಲ್ಲಿ. ಇವೆಲ್ಲ ಸೂಚಿಸುವುದು ಒಂದೇ ವಿಶೇಷತೆಯನ್ನು: ಕಾಲಕಾಲಕ್ಕೆ ಜಗತ್ತಿಗೆ ಧರ್ಮ, ಸತ್ಯ, ಶಾಂತಿ ಇವುಗಳ ಸಂದೇಶವನ್ನು ಸಾರಲು ಮಹಾತ್ಮರುಗಳ ಜನನವಾಗುತ್ತದೆ. ಕಾಲಚಕ್ರದಲ್ಲಿ ಮಾನವನು ದಿವ್ಯಸಂದೇಶಗಳನ್ನು ಮರೆತುಬಿಟ್ಟರೂ, ಭಗವಂತನನ್ನು ತಲುಪಬಲ್ಲ ಮಾರ್ಗವನ್ನು ತೋರಿಸಿಕೊಡಲು ಭಗವಂತನೇ ಜನ್ಮವೆತ್ತಿ ಬರುತ್ತಾನೆ. ಅವತಾರ, ಸಾಧು - ಸಂತರು, ಧರ್ಮಪ್ರವರ್ತಕರು — ಎಲ್ಲರೂ ಮಾಡುವ ಕಾರ್ಯವೊಂದೇ: ಧರ್ಮಸಂಸ್ಥಾಪನೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ,

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**
**ಅಭ್ಯುತ್ಥಾನಮಧರ್ಮಸ್ಯ ತದಾಽಽತ್ಮಾನಂ ಸೃಜಾಮ್ಯಹಮ್ ॥**

'ಎಲೈ ಅರ್ಜುನನೇ, ಪ್ರಪಂಚದಲ್ಲಿ ಯಾವಾಗಲೆಲ್ಲ ಧರ್ಮಕ್ಕೆ ಹಾನಿಯುಂಟಾಗುವುದೋ, ಅಧರ್ಮವು ವಿಜೃಂಭಿಸುವುದೋ ಆಗಲೆಲ್ಲ ನಾನು ಹುಟ್ಟಿ ಬರುತ್ತೇನೆ.' ಇದು ಪ್ರಪಂಚದಲ್ಲಿ ಹಲವು ಬಾರಿ ನಡೆದಿದೆ. ರಾಮ, ಕೃಷ್ಣ, ಬುದ್ಧರಂತಹ ಅವತಾರ ಪುರುಷರು, ವೇದ-ಉಪನಿಷತ್ತುಗಳನ್ನು ನೀಡಿದ ಋಷಿಮುನಿಗಳು, ಶಂಕರ-ರಾಮಾನುಜರೇ ಮುಂತಾದ ಆಚಾರ್ಯರು, ಭಕ್ತಿಮಾರ್ಗದ ಮೂಲಕ ಜನಸಾಮಾನ್ಯರನ್ನು ಭಗವಂತನೆಡೆಗೆ ಕೊಂಡೊಯ್ದ ಸಾಧು-ಸಂತರು ಇವರೆಲ್ಲರೂ ಅಧರ್ಮವನ್ನು ಕುಗ್ಗಿಸಿ, ಧರ್ಮಮಾರ್ಗದತ್ತ ಮನುಕುಲವನ್ನು ಮುನ್ನಡೆಸಿದ ಮಹಾತ್ಮರುಗಳು. ಸ್ವಾರ್ಥ, ದ್ವೇಷ, ಕ್ರೌರ್ಯ, ವಂಚನೆ, ಸುಳ್ಳು — ಇವೇ ಪ್ರಪಂಚದಲ್ಲಿ ಅಧರ್ಮವೆನಿಸಿದೆ. ಯಾವಾಗಲೂ ಇವುಗಳು ತಂದೊಡ್ಡುವುದು ದುಃಖ, ವಿನಾಶಗಳನ್ನು. ಇವುಗಳಿಗೆ ವಿರುದ್ಧವಾಗಿ ಜನರಲ್ಲಿ ಶ್ರದ್ಧೆ, ಪ್ರೀತಿ, ಭಕ್ತಿ, ವಿವೇಕ, ವಿಶಾಲ ಹೃದಯ ಹಾಗೂ ತ್ಯಾಗ-ವೈರಾಗ್ಯ ಇವನ್ನು ಹೆಚ್ಚಿಸುವುದು ಧರ್ಮ. ಸಾಮಾನ್ಯವಾಗಿ ಮಾನವನ ಬದುಕು ಆಹಾರ, ನಿದ್ರೆ, ಕುಟುಂಬ ಇವುಗಳ ನಿರ್ವಹಣೆಯಲ್ಲೇ ಮುಕ್ತಾಯವಾದರೆ, ಧರ್ಮವು ಮಾನವನನ್ನು ಅವುಗಳಾಚೆಗೆ ಕರೆದೊಯ್ಯುತ್ತದೆ. ಪ್ರಪಂಚದಾಚೆಗಿನ ಸತ್ಯದೆಡೆಗೆ ನಮ್ಮ ದೃಷ್ಟಿ ಬೀರುವಂತೆ ಮಾಡುತ್ತದೆ. ಕಣ್ಣಿಗೆ ಕಾಣುವ ಪ್ರಪಂಚಾದಚೆಗೆ ಇರುವ, ಇಡೀ ಸೃಷ್ಟಿಗೆ ಆಧಾರವಾಗಿರುವ ಶಾಶ್ವತವೂ ಶುದ್ಧವೂ ಅನಂತವೂ ಆದ ಪರಮಸತ್ಯವೇ ಭಗವಂತ; ಅವನನ್ನು ಅವಲಂಬಿಸಿಕೊಂಡೇ ಇಡೀ ಪ್ರಪಂಚ ನಡೆಯುತ್ತದೆ; ಅಂತಹ ಭಗವಂತನ ದರ್ಶನವೇ ಮಾನವನ ಗುರಿ. ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡರೆ ಮಾತ್ರ ಶಾಶ್ವತ ಆನಂದ, ನಿಜವಾದ ಮುಕ್ತಿ. ಇಲ್ಲದೆ ಹೋದರೆ ಸುಖ-ದುಃಖಗಳಿಂದ ಕೂಡಿದ ಪ್ರಪಂಚದಲ್ಲೇ ಕೊನೆಯಿಲ್ಲದೆ ಸುತ್ತುತ್ತಾ ಜೀವನ ನಡೆಸಬೇಕು. ಇದೇ ಬಂಧನ. ಜೀವಿಗಳನ್ನು ಬಂಧನದಿಂದ ಬಿಡಿಸಲು ಜನ್ಮವೆತ್ತಿ ಬರುವ ಭಗವಂತನೇ ಅವತಾರ ಪುರುಷ. ಅವನು ತೋರಿಸಿಕೊಡುವ ಜೀವನಕ್ರಮವೇ 'ಧರ್ಮ'. ಅವನನ್ನು ಅನುಸರಿಸಿ ಜೀವನ ನಡಸುವವರೇ ಧಾರ್ಮಿಕರು. ಆಧ್ಯಾತ್ಮಿಕತೆಯೇ ಈ ಧರ್ಮದ ತಳಹದಿ ಹಾಗೂ ಗುರಿ. ಪ್ರಪಂಚದ ಧರ್ಮಗಳೆಲ್ಲ ಈ ರೀತಿ ಭಗವಂತನೆಡೆಗೆ ಸಾಗುವ ಮಾರ್ಗಗಳು. ಶ್ರೀರಾಮಕೃಷ್ಣರು ಹೇಳುತ್ತಾರೆ: ''ಎಷ್ಟು ಮತಗಳೋ ಅಷ್ಟೇ ಪಥಗಳಿವೆ. ಎಲ್ಲಾ ಧರ್ಮಗಳೂ ಒಂದೇ ಭಗವಂತನನ್ನು ಹೊಂದಲು ಇರುವ ವಿಭಿನ್ನ ಮಾರ್ಗಗಳು. ಆದ್ದರಿಂದ ಪರಸ್ಪರ ದ್ವೇಷವಿಲ್ಲದೆ ಎಲ್ಲರೂ ಧರ್ಮಮಾರ್ಗದಲ್ಲಿ ಮುನ್ನಡೆಯಿರಿ, ಭಗವಂತನ ದರ್ಶನವನ್ನು ಪಡೆಯಿರಿ.'' ಅವರ ಈ ಸಂದೇಶವನ್ನು ಮನನ ಮಾಡುವುದೇ ಈ ಸಂದರ್ಭದಲ್ಲಿ ನಾವು ಮಾಡಬಹುದಾದ ಉತ್ತಮ ಕಾರ್ಯ.

## ಎಂದು ಧರ್ಮದ ಉದಯ ?

ಪ್ರಪಂಚದಲ್ಲಿ ಧರ್ಮದ ಉದಯ ಎಂದಾಯಿತು? ಈ ಪ್ರಶ್ನೆಗೆ ಉತ್ತರ ಎಲ್ಲೂ ಸಿಗುವುದಿಲ್ಲ. ಅತ್ಯಂತ ಪ್ರಾಚೀನ ನಾಗರಿಕತೆಗಳಲ್ಲಿ ಯಾವುದೋ ಒಂದು ವಿಧವಾದ ಆರಾಧನೆ, ಧಾರ್ಮಿಕ ಭಾವನೆ ಇತ್ತು ಎಂಬುದಾಗಿ ಚರಿತ್ರೆಯನ್ನು ಓದಿದರೆ ತಿಳಿದು ಬರುತ್ತದೆ. ಅದಕ್ಕೂ ಮುನ್ನ, ಆದಿಮ ಜನಾಂಗಗಳಲ್ಲಿ ವಿವಿಧ ಆರಾಧನೆ, ನಂಬಿಕೆ, ದೇವತೆಗಳು ಇದ್ದವು ಎನ್ನುತ್ತಾರೆ. ಆದರೆ ವಿಶ್ವಸಾಹಿತ್ಯದಲ್ಲೇ ಅತ್ಯಂತ ಪ್ರಾಚೀನ ಕೃತಿಯೆನಿಸಿದ ಋಗ್ವೇದ ಎಷ್ಟು ಹಿಂದಿನದು ಎಂಬುದೇ ಸ್ಪಷ್ಟವಾಗಿ ತಿಳಿದುಬಂದಿಲ್ಲ. ವೇದ

ಗಳಲ್ಲಿ ಕಂಡುಬರುವ ಕಾವ್ಯಾತ್ಮಕ ರಚನೆಗಳು ಅತ್ಯಂತ ಅಗಾಧವೂ, ಅಲೌಕಿಕವೂ, ಉದಾತ್ತವೂ ಆದ ಭಾವನೆಗಳಿಂದ ತುಂಬಿದೆ ಯೆಂಬುದು ನಿರ್ವಿವಾದ; ಅಂಥ ಭಾವನೆಗಳು ಮೂಡಿ ಬರಬೇಕಾದರೆ, ಅದಕ್ಕೂ ಮುನ್ನ ಎಷ್ಟೋ ಶತಮಾನಗಳ ಕಾಲ ವೈದಿಕ ಋಷಿಗಳ ಚಿಂತನ, ಮಂಥನ, ಸಾಧನೆಗಳು ನಡೆದಿರಬೇಡವೇ – ಈ ರೀತಿ ಇದನ್ನು ಚರ್ಚೆ ಮಾಡುವವರು, ಅದನ್ನು ಚಾರಿತ್ರಿಕ ದೃಷ್ಟಿಯಿಂದ ಮಾಡುತ್ತಾರೆ.

ಇನ್ನೊಂದು ದೃಷ್ಟಿಕೋನವಿದೆ. ಚರಿತ್ರೆಯಂತೆ ಕೇವಲ ಭೌತಿಕ ದಾಖಲೆ–ಕುರುಹುಗಳನ್ನು ಮಾತ್ರವೇ ಅವಲಂಬಿಸದೆ, ಪ್ರಪಂಚದ ಆಗುಹೋಗುಗಳನ್ನು ಸಾಂಪ್ರದಾಯಿಕ ದೃಷ್ಟಿಯಂತೆ ನೋಡುವುದು. ಇವರ ಪ್ರಕಾರ, ಪ್ರಪಂಚ ಅನಾದಿ, ಎಂದಿಗೋ ಇತ್ತು. ಕೊನೆಯಿಲ್ಲದೆ ಚಕ್ರದಂತೆ ನಾಲ್ಕು ಯುಗಗಳು ಸುತ್ತುತ್ತಿರುತ್ತವೆ. ಇಲ್ಲಿ ಪ್ರಪಂಚ ಎಂದೋ ಹುಟ್ಟಿತು, ವಿಕಸನ ಹೊಂದಿತು, ಕ್ರಮೇಣ ಇಂದಿನ ಅವಸ್ಥೆಗೆ ಬಂತು ಎಂಬ ಭಾವನೆಯಿಲ್ಲ. ಎಲ್ಲದಕ್ಕೂ ಮೂಲ ಭಗವಂತ; ಅವನಲ್ಲೇ ಎಲ್ಲದರ ಉಗಮ; ಪ್ರಪಂಚ ಹೀಗೆ ಮುಂದುವರಿಯುತ್ತದೆ. ಮುಂದೊಮ್ಮೆ ಪ್ರಳಯವಾಗಿ ಎಲ್ಲವೂ ಪರಬ್ರಹ್ಮನಲ್ಲಿ ಲಯವಾದರೂ, ಮತ್ತೆ ಜಗತ್ತಿನ ಸೃಷ್ಟಿಯಾಗುತ್ತದೆ. ಈ ದೃಷ್ಟಿಕೋನದ ಪ್ರಕಾರ, ಧರ್ಮದ ಉದಯ ಇತ್ಯಾದಿ ಅನ್ವೇಷಣೆಗಳಿಗೆ ಅಷ್ಟೊಂದು ಪ್ರಾಮುಖ್ಯತೆಯಿಲ್ಲ. ಕಾರಣ, ಧರ್ಮ ಕೂಡ ಅನಾದಿ; ಪರಮಾತ್ಮನಿಂದಲೇ ಅದು ಹುಟ್ಟಿಬಂತು. ಅವತಾರಪುರುಷರು, ಋಷಿಮುನಿಗಳು ಧರ್ಮವನ್ನು ಜನರ ನಡುವೆ ಹಬ್ಬಿಸಲೆಂದೇ ಹುಟ್ಟಿಬರುತ್ತಾರೆ. ಜನರ ಸ್ವಭಾವಕ್ಕನುಗುಣವಾಗಿ ಧರ್ಮ, ಅಧರ್ಮ ಇವು ಹೆಚ್ಚು ಕಡಿಮೆಯಾಗುತ್ತದೆ. ಆದರೆ ಒಂದಲ್ಲ ಒಂದು ಕಾಲದಲ್ಲಿ ಧಾರ್ಮಿಕರಾದವರು ಪ್ರಪಂಚದಲ್ಲಿ ಇದ್ದೇ ಇರುತ್ತಾರೆ. ಇದು ಭಾರತೀಯ ಚಿಂತನೆಗೆ ಹತ್ತಿರವಾದ ವಿವರಣೆ.

ಈ ಎರಡು ಬಗೆಯ ಚಿಂತನೆಗಳಿಗೆ ಭಿನ್ನವಾಗಿ, ತಾತ್ತ್ವಿಕ ದೃಷ್ಟಿಯಿಂದ ಧರ್ಮದ ಉದಯವನ್ನು ಅರ್ಥಮಾಡಿಕೊಳ್ಳಬಹುದು. ಕಾಲ–ದೇಶಗಳಿಗೆ ಬದ್ಧವಾಗಿ ಆಲೋಚಿಸಿದರೆ ಚಾರಿತ್ರಿಕ ವಿಧಾನವನ್ನು ಅನುಸರಿಸಬೇಕಾಗುವುದು. ಪೌರಾಣಿಕ ವಿವರಣೆಯನ್ನು ಅನುಸಿರಿಸಿದರೆ, ಧರ್ಮಗಳ ಬೆಳವಣಿಗೆಗಳನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಲಾಗುವುದಿಲ್ಲ. ಆದರೆ ತಾತ್ತ್ವಿಕ ದೃಷ್ಟಿಯಿಂದ ನೋಡಿದರೆ, ಈ ಮೇಲಿನ ಎರಡೂ ಕ್ರಮಗಳಿಗೆ ವಿರುದ್ಧವಲ್ಲದ, ಹೊಸ ಒಂದು ದೃಷ್ಟಿಕೋನವನ್ನು ಹೊಂದಬಹುದು: ಪರಮಾತ್ಮನು ಅನಾದಿ, ಅನಂತ, ಶಾಶ್ವತ ಸತ್ಯ. ಈ ಸತ್ಯಕ್ಕೆ ಅಳಿವಿಲ್ಲ. ಆದರೆ ಪ್ರಪಂಚ ಸೃಷ್ಟಿಯಾಗಿದೆ, ಅದರಲ್ಲಿ ಬದಲಾವಣೆಯಿದೆ; ಆದ್ದರಿಂದ ಅದಕ್ಕೆ ಅಂತ್ಯವೂ ಇದೆ. ಕಾಲಬದ್ಧವಾದ ಪ್ರಪಂಚದಲ್ಲಿ ಮನುಷ್ಯ ಜೀವನ ಒಂದು ಇತಿಹಾಸವನ್ನು ಹೊಂದಿದ್ದರೂ, ಧರ್ಮ–ಆಧ್ಯಾತ್ಮಿಕತೆಗಳು ಪ್ರಪಂಚದ, ಕಾಲದ ಮಿತಿಯನ್ನು ದಾಟಿಹೋಗಬಹುದು. ಮಾನವನ ವಿಕಸನದ ಒಂದು ಅವಧಿಯಲ್ಲಿ ಅವನಲ್ಲಿ ಧರ್ಮದ ಉದಯವಾದರೂ, ಮಾನವನ ಅಂತರಂಗವು ಭಗವಂತನ ಅಂಶವೇ ಆಗಿರುವುದರಿಂದ (ಅಥವಾ 'ಜೀವೋ ಬ್ರಹ್ಮೈವ ನಾಪರಃ' ಎಂಬಂತೆ, ಜೀವಾತ್ಮನೇ ಪರಮಾತ್ಮನಾಗಿರುವುದರಿಂದ), ಅದು ಅನಂತ ಆತ್ಮನಿಂದಲೇ ಬಂದ ವಿಚಾರ ತಾನೆ! ಆದ್ದರಿಂದ ಅದು ಎಲ್ಲಿ ಮೂಡಿತು, ಹೇಗೆ ಮೂಡಿತು, ಯಾರಲ್ಲಿ ಕಂಡುಬಂತು ಎಂಬ ಸಂಗತಿ ಮುಖ್ಯವಾಗುವುದಿಲ್ಲ; ಬದಲಾಗಿ ಅವನಿಗೆ ಒಂದು ಹೊಸ ದಾರಿ ಕಾಣಿಸುವುದೇ ಮುಖ್ಯವಾಗುತ್ತದೆ. ಆದರೆ, ಸೃಷ್ಟಿ ಎಂಬುದು ಎಷ್ಟು ಬಾರಿ ನಡೆಯುವುದು, ಭೂಮಿಯಂತಹ ಪ್ರಪಂಚಗಳು ಎಲ್ಲೆಲ್ಲಿ, ಎಷ್ಟು ಬಾರಿ ಮಾನವನಿಗೆ ನೆಲೆಯಾಗುವುವು, ಭೂಮಿ–ಸೃಷ್ಟಿ ನಾಶವಾದರೆ, ಮತ್ತೆ ಅದು ಸೃಷ್ಟಿಯಾಗುವುದೆ? — ಈ ಎಲ್ಲ ಪ್ರಶ್ನೆಗಳು ಇಲ್ಲಿ ಅಪ್ರಸ್ತುತ. ಶಾಶ್ವತ ಸತ್ಯವನ್ನು ಸೇರುವ ಮಾರ್ಗ(ಅಂದರ ಧರ್ಮ)ವಷ್ಟೇ ಮುಖ್ಯವಾಗುವುದು. ಭಗವಂತನು ನಿತ್ಯವಾಗಿದ್ದರೆ, ಮಾರ್ಗವು ಅವನಿಂದಲೇ ಹೊರಟಿದ್ದರೆ, ಆ ಮಾರ್ಗ ಎಂದೆಂದಿಗೂ ಇತ್ತೆಂದೇ ಅರ್ಥವಲ್ಲವೆ? ಆದ್ದರಿಂದ ಎಂದು, ಎಲ್ಲಿ ಇತ್ಯಾದಿ ಕಾಲ–ದೇಶ ಬದ್ಧವಾದ ವಿವರಗಳು ಮುಖ್ಯವಾಗುವುದಿಲ್ಲ.

### ಮಹಾತ್ಮರುಗಳ ಉದಯ, ಕಾರ್ಯ ಹಾಗೂ ಪ್ರಭಾವ

ಜನರಿಗೆ ದೈವೀಶಕ್ತಿಯಲ್ಲಿ ನಂಬಿಕೆ ಕಡಿಮೆಯಾದಾಗ, ಅಥವಾ ಅಳಿಸಿಹೋದಾಗ ಮಾನವನಲ್ಲಿ ಭೌತಿಕತೆ, ಕೇವಲ ಕಾಣುವ ಪ್ರಪಂಚದಲ್ಲಷ್ಟೇ ನಂಬಿಕೆ ಉಳಿಯುವುದು. ಆಗ ಮಾನವ ಧರ್ಮಭ್ರಷ್ಟನೂ, ವಂಚಕನೂ, ಸ್ವಾರ್ಥಿಯೂ, ಭೋಗಿಯೂ ಆಗುತ್ತಾನೆ. ಇದರ ಪ್ರಭಾವದಿಂದ ಧಾರ್ಮಿಕ ವ್ಯಕ್ತಿಗಳು, ಸತ್ಯಸಂಧರು, ಜನಸಾಮಾನ್ಯರು ಕಷ್ಟಕ್ಕೊಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ ಧರ್ಮಜಾಗೃತಿಯನ್ನು ಉಂಟುಮಾಡಲು ಭಗವಂತನು ತಾನೇ ಧರೆಗಿಳಿದು ಮನುಷ್ಯರೂಪದಲ್ಲಿ ಜನರ ನಡುವೆ ಬದುಕಿ, ಜನರಿಗೆ ದಾರಿ ತೋರುವನು. ಈ ಅದ್ಭುತ ಘಟನೆ ಪ್ರಪಂಚದಲ್ಲಿ ಕಾಲದಿಂದ ಕಾಲಕ್ಕೆ ನಡೆದಿದೆ. *(ಶ್ರೀರಾಮಕೃಷ್ಣ ಲೀಲಾ ಪ್ರಸಂಗ, ಭಾಗ ೧, ಪು.೬).* ಮಹಾತ್ಮರುಗಳ ಜೀವನದಲ್ಲಿ ಈ ಕೆಲವು ಸಮಾನ ಅಂಶಗಳು ಗಮನಕ್ಕೆ ಬರುತ್ತವೆ:

೧) ಧರ್ಮಭಾವನೆ ನಶಿಸಿ, ಜನರಲ್ಲಿ ನಂಬಿಕೆ ಅಳಿಸಿ, ನಿಜವಾಗಿ ಅವರಲ್ಲಿ ಧಾರ್ಮಿಕ ದೃಷ್ಟಿಯನ್ನು ಮೂಡಿಸಲೆಂದೇ ಮಹಾತ್ಮರ ಉದಯವಾಗುತ್ತದೆ.

೨) ಆಯಾ ಕಾಲ–ದೇಶಗಳಿಗೆ ಅನುಗುಣವಾಗಿ, ವಿವಿಧ ಅಗತ್ಯಗಳಿಗೆ ಅನುಗುಣವಾಗಿ ಮಹಾತ್ಮರ ಉದಯವಾದರೂ, ಅವರಲ್ಲಿನ ದೈವೀಭಾವ–ಅನುಭವ–ಉಪದೇಶಗಳಲ್ಲಿ ಸಮಾನತೆಯಿದೆ.

೩) ಹೀಗೆ ಉದಯವಾಗುವ ಮಹಾತ್ಮರ ಜೀವನ ಅಲೌಕಿಕವೂ ಅದ್ಭುತವೂ ಆಗಿರುತ್ತದೆ. ಇದರಿಂದ ಅವರು ಅನೇಕ ಅದ್ಭುತ ಕಾರ್ಯಗಳನ್ನು ಮಾಡುತ್ತಾರೆ.

೪) ಇಂತಹ ಮಹಾತ್ಮರ ಪ್ರಭಾವ ಮಾನವ ಜನಾಂಗದಲ್ಲಿ ಅನೇಕ ಕಾಲ ಇರುತ್ತದೆ; ಅದು ವ್ಯಾಪಿಸುತ್ತಾ ಹೋಗುತ್ತದೆ.

೫) ಈ ಮಹಾತ್ಮರನ್ನು ಅನುಸರಿಸಿ, ಅನೇಕ ಸಾಧನೆಗಳನ್ನು ಮಾಡುವ ಇನ್ನಿತರ ಮಹಾಪುರುಷರು ಮುಂದೆ ಜನಿಸುವರು. ಈ ರೀತಿ ಧಾರ್ಮಿಕ ಭಾವನೆಗಳು ಮುಂದುವರಿಯುತ್ತವೆ.

ಕೃಷ್ಣ ಹುಟ್ಟಿದ್ದು ಮಧ್ಯರಾತ್ರಿ; ಪ್ರಪಂಚವೆಲ್ಲ ಅಂಧಕಾರದಲ್ಲಿ ಮುಳುಗಿತ್ತು. ಆಗಿನ ಜನಜೀವನವೂ ಅಷ್ಟೆ. ದುಷ್ಟ ಕಂಸನ ಕೃತ್ಯಗಳಿಂದಾಗಿ ತತ್ತರಿಸಿ ಹೋಗಿತ್ತು . ಕೃಷ್ಣ ಜಗತ್ತಿಗೆ ಬೆಳಕು ತೋರಿದ. ಸಹಸ್ರಾರು ಜನರ ಮುಂದೆ ದಿವ್ಯಲೀಲೆಯನ್ನು ಮಾಡಿದ. ಮಾನವರಂತೆ ಬದುಕಿದರೂ, ಮಾನವರ ಬದುಕಿಗೆ ಹೊಸ ಒಂದು ಧಾರ್ಮಿಕ ಮಾರ್ಗವನ್ನು ತೋರಿಸಿದ.

ಬುದ್ಧನ ಜೀವನದಲ್ಲೂ ಅದೇ ರೀತಿ; ವೈದಿಕ ಧರ್ಮ ಜಡವಾಗಿತ್ತು. ಜನರಿಗೆ ಯಾವುದು ದಿವ್ಯಮಾರ್ಗವೆಂಬುದೇ ತಿಳಿಯದಾಯಿತು. ಬುದ್ಧ ಜನರಿಗೆ ತೋರಿದ ದಾರಿ ವಿನೂತನವಾಗಿತ್ತು. ಸರಳವೂ, ನೇರವೂ ಸುಲಭವೂ ಆಗಿತ್ತು . ಅದಕ್ಕಾಗಿಯೇ ಅವನ ಹೊಸ ಮಾರ್ಗ ವಿಶ್ವವ್ಯಾಪಕವಾಯಿತು.

ಕ್ರಿಸ್ತ, ಮಹಮ್ಮದರು ತಮ್ಮ ಕಾಲಘಟ್ಟದಲ್ಲಿ ಜನರಿಗೆ ನೀಡಿದ ಸಂದೇಶಗಳೂ ಕೂಡ ಹೊಸತನದಿಂದ ಕೂಡಿದ್ದವು. ಲೌಕಿಕ ಪ್ರಪಂಚದಲ್ಲಿ , ಸಂಘರ್ಷಗಳಲ್ಲಿ ಮುಳುಗಿ ಹೋಗಿದ್ದ ಜನರಿಗೆ ದಿವ್ಯ ಪ್ರಕಾಶವೊಂದರ ಅಸ್ತಿತ್ವವನ್ನು ಅವರು ತೋರಿಸಿಕೊಟ್ಟರು.

ನಮ್ಮ ದೇಶದಲ್ಲಿ ಬೌದ್ಧಧರ್ಮದ ಪ್ರಭಾವ ಒಂದು ಕಾಲದಲ್ಲಿ ಹೆಚ್ಚಾಗಿದ್ದರೂ, ಕ್ರಮೇಣ ಅಲ್ಲೂ ಅವನತಿಯುಂಟಾಯಿತು; ಆಗ ಮತ್ತೆ ನಿಜವಾದ ಧರ್ಮ, ಆಧ್ಯಾತ್ಮಿಕತೆಗಳ ಅಗತ್ಯ ಕಂಡುಬಂತು. ಸನಾತನ ಧರ್ಮದ, ವೈದಿಕ ತತ್ತ್ವಗಳ ಮರುವ್ಯಾಖ್ಯಾನ ಮಾಡುತ್ತ ಶಂಕರರು ಭಾರತದ ಆಧ್ಯಾತ್ಮಿಕ ಜೀವನಕ್ಕೆ ಮರುಹುಟ್ಟನ್ನು ನೀಡಿದರು. ವೇದಾಂತ ತತ್ತ್ವಗಳ ಪಾರಮ್ಯವನ್ನು ಎತ್ತಿ ಹಿಡಿದುದು, ಭಾರತೀಯ ಧಾರ್ಮಿಕ ಪರಂಪರೆಗೆ ದೃಢವಾದ ಅಡಿಗಲ್ಲನ್ನೇ ಹಾಕಿಕೊಟ್ಟಂತಾಯಿತು. ವಿವಿಧ ದರ್ಶನಗಳ, ರಾಮಾನುಜ-ಮಧ್ವರೇ ಮೊದಲಾದ ಆಚಾರ್ಯರುಗಳ ಆಧ್ಯಾತ್ಮಿಕ ಮಾರ್ಗಗಳು ಗೋಚರಿಸತೊಡಗಿದವು. ವೇದಾಂತ ದರ್ಶನವು ಮನೆಮನೆಗಳಲ್ಲಿ ಅನುಷ್ಠಾನ ಕ್ರಮಗಳಾಗಿ ಮಾರ್ಪಟ್ಟವು.

### ಆಧುನಿಕ ಕಾಲಘಟ್ಟ : ಶ್ರೀರಾಮಕೃಷ್ಣರ ಉದಯ

ಆದರೆ ಕಾಲಕ್ರಮದಲ್ಲಿ ಭಾರತೀಯ ಜನಜೀವನ ಹಲವಾರು ಬಗೆಯ ರಾಜಕೀಯ, ಸಾಮಾಜಿಕ ಬದಲಾವಣೆಗಳಿಗೆ ಒಳಗಾಯಿತು. ವಿದೇಶೀ ಆಕ್ರಮಣ, ಜಾತಿಪದ್ಧತಿ, ಆಧುನಿಕತೆಯ ಪ್ರವೇಶ ಇತ್ಯಾದಿಗಳಿಂದ ಭಾರತೀಯ ಆಧ್ಯಾತ್ಮಿಕ ಪರಂಪರೆ ಜನರಿಂದ ಕಣ್ಮರೆಯಾಗುವ ಪರಿಸ್ಥಿತಿಗೆ ಒಳಗಾದಂತೆ ಕಂಡುಬಂತು. ಆಗ ಸನಾತನ ಧರ್ಮದ ಶಾಶ್ವತ ಸತ್ಯಗಳನ್ನು ಮತ್ತೆ ಅದೇ ಪರಿಶುದ್ಧ ರೂಪದಲ್ಲಿ ಪ್ರತಿಷ್ಠಾಪಿಸಲು ಬಂದವರೇ ಶ್ರೀರಾಮಕೃಷ್ಣ ಪರಮಹಂಸರು. ತಮ್ಮ ಜಾಜ್ವಲ್ಯಮಾನವಾದ ಆಧ್ಯಾತ್ಮಿಕ ಅನುಭೂತಿಗಳಿಂದ, ವಿವಿಧ ಮಾರ್ಗಗಳಲ್ಲಿ ಸಾಧನೆ ಮಾಡಿ ಗುರಿ ಮುಟ್ಟಿದ ಹಿನ್ನೆಲೆಯಿಂದ ಅವರ ಸಂದೇಶಗಳಲ್ಲಿ ಆಧುನಿಕತೆಯಿತ್ತು, ವಿಶ್ವವಿಶಾಲ ಭಾವನೆಯಿತ್ತು, ಎಲ್ಲ ಧರ್ಮ-ಪಂಥ-ತತ್ತ್ವಗಳನ್ನು ಸಮನ್ವಯಗೊಳಿಸುವ ಪರಿಪೂರ್ಣತೆಯಿತ್ತು. ಶ್ರೀರಾಮಕೃಷ್ಣರ ದಿವ್ಯಜೀವನ-ಸಂದೇಶಗಳನ್ನು ಜಗತ್ತಿನಲ್ಲೆಡೆ ಪಸರಿಸಿದ ಕೀರ್ತಿ, ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರದು. ಶ್ರೀರಾಮಕೃಷ್ಣರ ಎಲ್ಲ ಸಂದೇಶಗಳ ಸಾಕಾರ ಮೂರ್ತಿಯಂತಿದ್ದ ಶ್ರೀಮಾತೆ ಶಾರದಾದೇವಿಯವರ ಜೀವನವು ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಇನ್ನೊಂದು ಇತಿಹಾಸವನ್ನೇ ನಿರ್ಮಿಸಿತು. ಇದರೊಂದಿಗೆ ಒಡನಾಡಿದ ನೂರಾರು ಮಂದಿ ಸಾಧಕರು ಕೂಡ ದಿವ್ಯತೆಯ ಸ್ರೋತದಲ್ಲಿ ಹೊಸ ಹೊಸ ಅಲೆಗಳನ್ನು ಮೂಡಿಸುತ್ತಾ ಪ್ರಪಂಚದೆಲ್ಲೆಡೆ ಆಧ್ಯಾತ್ಮಿಕ ಗಂಗೆಯನ್ನು ವ್ಯಾಪಿಸುವಲ್ಲಿ ತಮ್ಮ ಪಾತ್ರ ವಹಿಸಿ ಪುನೀತರಾದರು. ಈ ದಿವ್ಯಗಂಗೆ ಇನ್ನೂ ಹರಿಯುತ್ತಿದೆ — ಹೊಸ ಹೊಸ ಭೂಪ್ರದೇಶಗಳನ್ನು ತಣಿಸುತ್ತಿದೆ. ದ್ವೇಷವಿಲ್ಲದ, ಮತಾಂಧತೆಯಿಲ್ಲದ, ಪ್ರಾಯೋಗಿಕವೂ ಸತ್ಯಪೂರ್ಣವೂ ಆದ, ಆಧ್ಯಾತ್ಮಿಕತೆಯನ್ನು ಸ್ವಲ್ಪವೂ ಲಘುವಾಗಿಸದ ಧಾರ್ಮಿಕ-ಆಧ್ಯಾತ್ಮಿಕ ಜೀವನ ಎಂತಹುದು ಎಂದು ಈ ಮಾರ್ಗವು ತಿಳಿಸಿಕೊಡುತ್ತದೆ. ಸನಾತನ ಧರ್ಮದ, ವೇದಾಂತದ ನೆಲೆಗಟ್ಟಿನ ಮೇಲೆ ನಿಂತದ್ದಾದರೂ, ಶ್ರೀರಾಮಕೃಷ್ಣರ ಜೀವನ-ಸಂದೇಶಗಳನ್ನು ಪ್ರಧಾನವಾಗಿ ಅವಲಂಬಿಸಿದ ಧ್ಯೇಯ-ಆದರ್ಶಗಳೇ ರಾಮಕೃಷ್ಣ ಮಹಾಸಂಘದ ಸ್ಥಾಪನೆಗೆ ಮೂಲಪ್ರೇರಣೆ. ಸ್ವಾಮಿ ವಿವೇಕಾನಂದರು ೧೮೯೭ರ ಮೇ ೧ ರಂದು ಸ್ಥಾಪಿಸಿದ ರಾಮಕೃಷ್ಣ ಮಠ ಮತ್ತು ಮಿಷನ್ ಈ ವರ್ಷ ಮೇ ತಿಂಗಳಿನಿಂದ ಒಂದು ವರ್ಷ ತನ್ನ ೧೨೫ನೇ ವಾರ್ಷಿಕೋತ್ಸವವನ್ನು ಆಚರಿಸುತ್ತದೆ. ಈ ಸಂದರ್ಭದಲ್ಲಿ ಪರಮಾತ್ಮನ ಸಂಕಲ್ಪಕ್ಕೆ ಅನುಗುಣವಾಗಿ ಪ್ರಪಂಚದೆಲ್ಲೆಡೆ ವಿವಿಧ ಕಾಲದಲ್ಲಿ, ವಿವಿಧ ಪ್ರದೇಶಗಳಲ್ಲಿ ಆವಿರ್ಭವಿಸಿದ ಎಲ್ಲ ಧರ್ಮಸಂಸ್ಥಾಪಕರಿಗೆ, ಅವತಾರಪುರುಷರಿಗೆ ಹಾಗೂ ಸಾಧು-ಸಂತರಿಗೆ ನಮನಗಳನ್ನು ಸಲ್ಲಿಸುತ್ತಾ ಈ ವಿಶೇಷ ವರ್ಷಾವಧಿಯ ಆಚರಣೆ ಅತ್ಯಂತ ಯಶಸ್ಸನ್ನು ಕಾಣಲಿ ಎಂದು ಹಾರೈಸುತ್ತೇವೆ. ✽

### ಮೇ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೩ | ಮಂಗಳವಾರ | ಶ್ರೀ ಬಸವ ಜಯಂತಿ |
| ೬ | ಶುಕ್ರವಾರ | ಶ್ರೀ ಶಂಕರ ಜಯಂತಿ |
| | | ಶ್ರೀ ರಾಮಾನುಜ ಜಯಂತಿ |
| ೧೨ | ಗುರುವಾರ | ಏಕಾದಶಿ |
| ೧೬ | ಸೋಮವಾರ | ಬುದ್ಧ ಪೂರ್ಣಿಮೆ |
| ೨೬ | ಗುರುವಾರ | ಏಕಾದಶಿ |